# ಆಹಾ ಸುದ್ದಿ!

★ ಸಸಿತೋಟ



ಈ ಕಡಿಜೀರಿಗೆ ಹುಳು ನೀರಿನ ಗುಳ್ಳೆ ಏಳಿಸುತ್ತಿರುವುದು ಆಟಕ್ಕಲ್ಲ; ಗೂಡು ಒಣಗಿಸುವ ಟೆಕ್ನಿಕ್ ಅಂತೆ. ತನ್ನ ಗೂಡಿನಲ್ಲಿ ತುಂಬಿದ ನೀರನ್ನು ಬಾಯಿಂದ ಹೀರಿ ತೆಗೆದು ಗುಳ್ಳೆ ಮಾಡಿ ಆಚೆ ಹಾಕುತ್ತಿರುವುದನ್ನು ಮಲೇಷ್ಯಾದ ಹವ್ಯಾಸಿ ಛಾಯಾಗ್ರಾಹಕನೊಬ್ಬ ಸೆರೆಹಿಡಿದಿದ್ದಾನೆ. ಮ್ಯಾಜಿಕ್ ಮೋಪ್, ಡ್ರೈಯರ್ ಎಲ್ಲದರ ಪೇಟೆಂಟ್ ಕಡಿಜೀರಿಗೆಯ ಹೆಸರಲ್ಲೇ ಇರಬಹುದು!

ಇಂಗ್ಲೆಂಡ್‌ನಲ್ಲಿ ಈಚೆಗೆ ನಡೆದ ಚುನಾವಣೆಯಲ್ಲಿ ಲೇಬರ್ ಪಕ್ಷ ಶೇ. 40ರಷ್ಟು ಮತ ಗಳಿಸಿದ್ದೇ ತಡ, ಕೆಂಟ್ ವಿಶ್ವವಿದ್ಯಾಲಯದ ಪ್ರೊ.ಗುಡ್‌ವಿನ್ ಬ್ರೆಕ್ಸಿಟ್ ಕುರಿತ ಪುಸ್ತಕವನ್ನು ಟಿವಿ ಸ್ಟುಡಿಯೋದಲ್ಲಿ ಕೂತು ಅಗಿದು ತಿಂದರಂತೆ. ಶೇ. 38ರಷ್ಟು ಮತ ಬಂದರೆ ನೋಡಿ, ಪುಸ್ತಕವನ್ನೇ ಅಗಿದು ತಿನ್ನುತ್ತೇನೆ ಎಂದು ಆ ಪ್ರೊಫೆಸರ್ ಟ್ವೀಟ್ ಮಾಡಿದ್ದೇ ಇದಕ್ಕೆ ಕಾರಣವಂತೆ. ಬಹುಶಃ 'ಈಟ್ ಮೈ ವರ್ಡ್ಸ್' ಎನ್ನುವುದನ್ನು 'ಈಟ್ ದಿಸ್ ಬುಕ್' ಎಂದು ಮರೆಗುಳಿ ಪ್ರೊಫೆಸರ್ ಟ್ವೀಟ್ ಮಾಡಿರಬಹುದು.



ಚೀನಾದ ವಿದ್ಯಾರ್ಥಿನಿಯೊಬ್ಬಳು ಆರ್ಡರ್ ಮಾಡಿದ್ದು ಬಸವನ ಹುಳುವಿನ ಸೂಪ್‌ನಲ್ಲಿ ಮಾಡಿದ ಅಕ್ಕಿ ನೂಡಲ್ಸ್. ಆದರೆ ಪಾರ್ಸಲ್ ತೆರೆದು ತಿನ್ನತೊಡಗಿದಾಗ ಸಿಕ್ಕಿದ್ದು ಈ ಹಾವು. ಈಗ ಪೊಲೀಸರು ಆ ಉಪಾಹಾರಗೃಹವನ್ನು ಮುಚ್ಚಿಸಿದ್ದಾರಂತೆ. ಆಕೆ ಕೇವಲ ತರಕಾರಿ ತಿನ್ನುವವವಳೇನಲ್ಲ. ಆದರೂ ಈ ಹಾವನ್ನು ತಾನು ಆರ್ಡರ್ ಮಾಡಿರಲಿಲ್ಲ ಎಂಬುದು ಆಕೆಯ ತಕರಾರು.




ಸದ್ಯಕ್ಕಂತೂ ಇನ್‌ಸ್ಟಾಗ್ರಾಮಿನಲ್ಲಿ ಬ್ಲಾಗರ್ ಹಿಮಾಂಶು ಸೆಹಗಲ್‌ನ ಹಳದಿ ತಟ್ಟೆಯ ಚಿತ್ರಗಳೇ ತುಂಬಿಕೊಂಡಿವೆ. ಇಂಡಿಯ ಗೇಟ್ ಎದುರಿನ ಭೇಲ್‌ಪುರಿಯಿಂದ ಹಿಡಿದು, ಜುಹೂ ಬೀಚ್‌ನ ಪಾವ್ ಬಾಜಿ, ಋಷಿಕೇಶದ ಪರಾಠಾವರೆಗೆ ಎಲ್ಲೆಲ್ಲೂ ಹಳದಿ ತಟ್ಟೆಯೇ ಮಿಂಚುತ್ತಿದೆ. ಈ ಹಳದಿ ತಟ್ಟೆಯಲ್ಲಿ ತಿನಿಸು ತುಂಬಿ ಫೋಟೊ ತೆಗೆಯುವ ಸಲುವಾಗಿಯೇ ದೇಶದೆಲ್ಲೆಡೆ ಸುತ್ತುತ್ತಿದ್ದಾನಂತೆ ಈ ಬ್ಲಾಗರ್. 'ಎಲ್ಲೋ ಎಲ್ಲೋ'ದಲ್ಲಿ ಡರ್ಟಿ ಬದಲು ಈಟೇಬಲ್ಸ್ ತುಂಬಿಸಿದ್ದಾನೆ ಅಷ್ಟೆ.



ಟೆಕ್ಸಾಸ್‌ನ ಈ ಮಹಿಳೆ ಕ್ಲಾಡಿಯಾಗೆ ತಾನು ಅಮೆರಿಕಾದ ಪ್ರಥಮ ಮಹಿಳೆ ಮೆಲಾನಿಯ ಟ್ರಂಪ್‌ಳಂತೆ ಎಂದು ಒಳಗೊಳಗೇ ಅನಿಸುತ್ತಿತ್ತಂತೆ. ಇನ್ನೇಕೆ ತಡ, ದೇಹದ ಹೊರಭಾಗವನ್ನೆಲ್ಲ ಪ್ಲಾಸ್ಟಿಕ್ ಸರ್ಜರಿಗೆ ಒಳಪಡಿಸಿಯೇ ಬಿಟ್ಟಳು. ಸದ್ಯ ಅಧ್ಯಕ್ಷರ ಶ್ವೇತಭವನದ ಕದ ತಟ್ಟದಿದ್ದರೆ ಸಾಕು.

ಕಡಲ ನಳ್ಳಿ (ಲಾಬ್‌ಸ್ಟರ್)ಗಳನ್ನು ಬೇಯಿಸುವ ಮುನ್ನ ಅವುಗಳನ್ನು ಮಂಜುಗಡ್ಡೆಯಲ್ಲಿ ಇಡಬಾರದು ಎಂದು ಇಟಲಿಯ ಕೋರ್ಟ್ ತಾಕೀತು ಮಾಡಿದೆಯಂತೆ. ಜೀವಂತ ನಳ್ಳಿಗಳನ್ನು ನೇರವಾಗಿ ಬಾಣಲೆಗೆ ಹಾಕಿ ಹುರಿಯುವುದೋ, ಬೇಯಿಸುವುದೋ ಮಾಡುವುದು ರೂಢಿ. ಹಾಗಂತ ಮಂಜುಗಡ್ಡೆಯಲ್ಲಿಟ್ಟು ಅವುಗಳಿಗೆ ಶೀತವಾದರೆ.. ಬೆಚ್ಚಗಿನ ನೀರಲ್ಲಿಟ್ಟು ಆಮ್ಲಜನಕವನ್ನೂ ಪೂರೈಸಿ ಎಂದು ಹೇಳಿದೆಯಂತೆ ಕೋರ್ಟ್. ಬಲಿಗೆ ಮುನ್ನ ಪೂಜೆ ಮಾಡಿದಂತೆ.